ಸಾಕ್ಷಿಯನ್ನು 23.11.2022 ರಂದು ಕರೆಸಿ ಪ್ರಮಾಣವಚನ ಮಾಡಿಸಲಾಯಿತು. **ಪಿ.ಡಬ್ಲ್ಯೂ-1**

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

**1.** ನಾನು ವ್ಯವಸಾಯ ಮಾಡುತ್ತೇನೆ. ಅದಕ್ಕೆ ಪೂರಕವಾಗಿ ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ನೀಡಿರುವುದಿಲ್ಲ. ನಾನು ವ್ಯವಸಾಯ ಮಾಡುತ್ತಿರುವ ಬಗ್ಗೆ ದಾಖಲೆಗಳನ್ನು ಕೊಡಲು ಯಾವುದೆ ತೊಂದರೆ ಇಲ್ಲ. ನಾನು ಸುಮಾರು 20 ವರ್ಷದಿಂದ ಬ್ಯಾಂಕ್ ಖಾತೆಯನ್ನು ಶಿವನಸಮುದ್ರದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಈಗ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ತೆರೆದಿರುತ್ತೇನೆ. ನನ್ನ ಬ್ಯಾಂಕ್ ಖಾತೆಯ ಸ್ಟೇಟ್ ಮೆಂಟನ್ನು ಖಾತೆ ತೆರೆದ ದಿನದಿಂದ ಇಲ್ಲಿವರೆಗು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಆದರೆ ಇನ್ನು ಮುಂದೆ ಹಾಜರುಪಡಿಸಬಹುದು. ಈ ಸಂದರ್ಭದಲ್ಲಿ ಬ್ಯಾಂಕ್ ಸ್ಟೇಟ್‌ಮಂಟನ್ನುಹಾಜರುಪಡಿಸಲು ನನಗೆ ಯಾವುದೆ ತೊಂದರೆ ಇರಲಿಲ್ಲ.

**2.** ನನ್ನ ಆದಾಯ ಮೂಲದ ಬಗ್ಗೆ ಯಾವುದೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಹಾಜರುಪಡಿಸದೆ ಇರಲು ನನಗೆ ಯಾವುದೆ ತೊಂದರೆ ಇರಲಿಲ್ಲ. ನನ್ನ ತಂದೆ ಹೆಸರು ಗೋವಿಂದರಾಜು ಎಂದರೆ ಸರಿ ಸದರಿಯವರಿಗೆ ಒಟ್ಟು 8 ಜನ ಮಕ್ಕಳಿದ್ದಾರೆ. ಅವರಗಳು ನಾಗರಾಜು , ಸ್ವರ್ಣಗೌರಿ , ಜ್ಯೋತಿ , ಜ್ಯೋತಿಕಲಾ, ಸುಜಾತ, ಪೂರ್ಣಿಮ , ಗಣೇಶ , ಹಾಗೂ ನಾನು ಅಂದರೆ ಜಿ.ಕೃಷ್ಣಮೂರ್ತಿ ಮತ್ತು ವರಲಕ್ಷ್ಮಿ. ನಮ್ಮ ಕುಟುಂಬದಲ್ಲಿ ನಾವು ಯಾವುದೇ ವಿಭಾಗ ಮಾಡಿಕೊಂಡಿಲ್ಲ. ನಮ್ಮ ಕುಟುಂಬದಲ್ಲಿ ಆಸ್ತಿಗಳು ನಮ್ಮ ತಂದೆ ಮತ್ತು ತಾಯಿಯ ಹೆಸರಿನಲ್ಲಿ ಇವೆ. ಅದಕ್ಕೆ ಪೂರಕವಾಗಿ ನ್ಯಾಯಾಲಯದಲ್ಲಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಹಾಜರಪಡಿಸಲು ನನಗೆ ಯಾವುದೆ ತೊಂದರೆ ಇಲ್ಲ. ನನ್ನ ಮೊದಲನೆ ಅಣ್ಣ ನಾಗರಾಜು ಮಲೆಮಾದೇಶ್ವರ ಬೆಟ್ಟದಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ ಅವರು ಎಷ್ಟು ವರ್ಷದಿಂದ ಕೆಲಸ ಮಾಡುತ್ತಿದ್ದಾರೆ ನನಗೆ ಗೊತ್ತಿಲ್ಲ. ಸದರಿಯವರಿಗೆ ಎಷ್ಟು ಸಂಬಳ ಎಂದು ನನಗೆ ಗೊತ್ತಿಲ್ಲ. ಸದರಿಯವರು ಆಸ್ತಿಗಳನ್ನು ಮಾಡಿದ್ದಾರಾ ಇಲ್ಲವಾ ನನಗೆ ಗೊತ್ತಿಲ್ಲ. ನಾಗರಾಜುರವರಿಗೆ ಇಬ್ಬರು ಮಕ್ಕಳು. ಅವರ ಮಗ ಇಂಜಿನಿಯರಿಂಗ್ ಓದಿರುತ್ತಾನೆ ಮತ್ತು ಮಗಳು ಪಿಯುಸಿ ಓದುತ್ತಿದ್ದಾಳೆ. ನಾಗರಜುರವರ ಮಗನಿಗೆ ಇಂಜಿನಿಯರಿಂಗ್ ಸೀಟು ಸರ್ಕಾರದಿಂದ ಅಲಾಟ್ ಆಗಿತ್ತ ಅಥವಾ ಖಾಸಗಿ ಸಂಸ್ಥೆಯಿಂದ ಅಲಾಟ್ ಆಗಿತ್ತ ನನಗೆ ಗೊತ್ತಿಲ್ಲ. ನಾಗರಾಜುರವರ ಮಗಳು

ಪಿಯುಸಿ ಯನ್ನು ಖಾಸಗಿ ಕಾಲೇಜಿನಲ್ಲಿ ಓದುತ್ತಿದ್ದಾಳೆ. ನಾಗರಾಜುರವರಿಗೆ ಮಾದೇಶ್ವರ ಸ್ವಾಮಿ ಬೆಟ್ಟದಲ್ಲಿ ಇರುವ ಕೆಲಸದಿಂದ ಬರುವ ಆದಾಯ ಹೊರತುಪಡಿಸಿ ಬೇರೆ ಯಾವುದೆ ಆದಾಯ ಇಲ್ಲ ಎಂದರೆ ಸರಿ. ನಾಗರಾಜುರವರು ನೌಕರರಿಗೆ ತೊಂದರೆ ಕೊಟ್ಟ ಬಗ್ಗೆ ನೌಕರರು ನಾಗರಾಜುರವರ ವಿರುದ್ದ ಬೆಟ್ಟದ ಆಡಳಿತಾಧಿಕಾರಿರವರಿಗೆ ಒಂದು ದೂರನ್ನು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ.

3. ಸಾಕ್ಷಿಗೆಒಂದು ದಾಖಲ ತೋರಿಸಲಾಗಿ ಸದರಿ ದಾಖಲೆ ಬಿಳಿಗಿರಿ ಎಕ್ಸಪ್ರೆಸ್ ಕನ್ನಡ ಪಾಕ್ಷಿಕ ಪತ್ರಿಕೆ ಆಗಿದ್ದು ಅದರಲ್ಲಿ ಬಲಗಡೆ ಇರುವ ಒಂದು ಭಾವಚಿತ್ರವನ್ನು ತೋರಿಸಲಾಗಿ ಸದರಿ ವ್ಯಕ್ತಿ ತನ್ನ ಅಣ್ಣ ಎಂದು ನೋಡಿ ಗುರುತಿಸಿರುವುದರಿಂದ ಸದರಿ ವಾರ್ತ ಪತ್ರಿಕೆಯನ್ನು ನಿಡಿ 1 ಎಂದು, ಗುರುತಿಸಲಾಯಿತು. ಮಾದೇಶ್ವರ ಬೆಟ್ಟ ದೇವಸ್ಥಾನದ ಕಛೇರಿಯಲ್ಲಿ ಬಡ್ಡಿ ದಂದೆಯಲ್ಲಿ ನಾಗರಾಜು ಮುಂಚೂಣಿ ಎಂದು ಪತ್ರಿಕೆಯಲ್ಲಿ ವರದಿಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಾಗರಾಜುರವರ ಕಿರುಕುಳ ತಡೆಯಲು ಆಗದೆ ಆರೋಪಿ ಮತ್ತು ಇನ್ನಿತರೆ ಸಿಬ್ಬಂದಿರವರು ದಯಾಮರಣ ಕೋರಿ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಇದೇ ವಿಚರವಾಗಿ ದಿಃ 27.04.2018 ರಂದು ಆರೋಪಿ ನನ್ನ ಹಾಗೂ ಜಿ.ನಗರಾಜು, ಶಿವಕುಮಾರ ಎಂ.ಪಿ , ಎಂ.ಎನ್ ಸತೀಶ , ಬಿ ಮಹದೇವ , ಎನ್.ಕೆ ದಿನೇಶ ರವರ ವಿರುದ್ದ ಒಂದು ಪೊಲೀಸ್ ದೂರನ್ನು ನೀಡಿದ್ದರು ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ. ಪೊಲೀಸರು ನಮ್ಮನ್ನು ಕರೆದು ವಿಚಾರಣೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ನನ ಅಣ್ಣನ ಕರೆದು ಪೊಲೀಸರು ವಿಚಾರಣೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಣ್ಣ ಎಂ.ಎನ್ ಸತೀಶ ರವರ ಮೂಲಕ ಅಪರ ಸಿವಿಲ್ ನ್ಯಾಯಾಲಯ , ಮಳವಳ್ಳಿಯಲ್ಲಿ ಸಿಸಿ ನಂ.444/2016 ನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಮೇಲೆ ಎಷ್ಟು ಪ್ರಕರಣಗಳು ಇವೆ ಎಂದು ನನಗೆ ಗೊತ್ತಿಲ್ಲ. ಸದರಿ ಪ್ರಕರಣ ಏನಾಗಿದೆ ಎಂಬ ವಿಚಾರ ನನಗೆ ಗೊತ್ತಿಲ್ಲ. ಸದರಿ ಪ್ರಕರಣವನ್ನು ಕೂಡ ಈ ಪ್ರಕರಣ ನಡೆಸುತ್ತಿರುವ ನನ್ನ ವಕೀಲರೆ ನಡೆಸುತ್ತಿದ್ದು ಅದು ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

4. ಆರೋಪಿಗೆ ನಾನು ವಕೀಲರ ಮೂಲಕ ನೋಟೀಸು ಕೊಟ್ಟಿರುತ್ತೇನೆ. ಸದರಿ ನೋಟಿಸಿಗೆ ಆರೋಪಿ ಪ್ರತ್ಯುತ್ತರ ಕೊಟ್ಟಿರುತ್ತಾರೆ. ಆರೋಪಿ ಕೊಟ್ಟ ಪ್ರತ್ಯುತ್ತರ ನೋಟಿಸಲ್ಲಿ ಏನೆಲ್ಲ ವಿಚಾರ ಬರೆದಿದೆ ಎಂದು ನಾನು ತಿಳಿದುಕೊಂಡಿಲ್ಲ, ತಿಳಿದುಕೊಳ್ಳಲು ನನಗೆ ತೊಂದರೆ ಇರಲಿಲ್ಲ. ನಮ್ಮ ವಕೀಲರು ಸದರಿ ಪ್ರತ್ಯುತ್ತರ

ನೋಟಿಸಲ್ಲಿ ಏನೇನು ವಿಚಾರ ಬರೆದಿದೆ ಎಂದು ನನಗೆ ತಿಳಿಸಿರುತ್ತಾರೆ. ಆರೋಪಿ ತಮ್ಮ ಪ್ರತ್ಯುತ್ತರದಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಈಗ ನೆನಪು ಬರುತ್ತಿಲ್ಲ. ಸಾಕ್ಷಿಗೆ ನಿಪಿ 8 ರಲ್ಲಿ ಇರುವ ಎರಡನೆ ಪುಟದ ಕೊನೆ ಪ್ಯಾರವನ್ನು ಆರೋಪಿ ಪರ ವಕೀಲರು ಓದಿ ಹೇಳಿದ್ದು , ಆ ರೀತಿ ಆರೋಪಿ ಪ್ರತ್ಯುತ್ತರದಲ್ಲಿ ಬರೆದಿರುವುದು ನಿಜ ಆದರೆ ಅದು ಸುಳ್ಳು ಎಂದು ನುಡಿದಿದ್ದಾರೆ. ಆರೋಪಿ ತಮ್ಮ ಪ್ರತ್ಯುತ್ತರ ನೋಟಿಸಿನಲ್ಲಿ ಮಾಡಿರುವ ಆರೋಪದ ವಿರುದ್ದ ನಾನಾಗಲಿ ಅಥವಾ ನನ್ನ ಅಣ್ಣ ನಾಗರಾಜುರವರಾಗಲಿ ಯಾವುದೆ ಪ್ರಕರಣವನ್ನು ಹಾಕಿರುವುದಿಲ್ಲ. ಈ ವಿಚಾರವಾಗಿ ಆರೋಪಿಯ ವಿರುದ್ದ ಪ್ರಕರಣ ಸಲ್ಲಿಸಲು ನನಗಾಗಲಿ ಅಥವಾ ನ್ನನ್ನ ಅಣ್ಣನಿಗಾಗಲಿ ಯಾವುದೆ ತೊಂದರೆ ಇರಲಿಲ್ಲ ಎಂದರೆ ಸರಿ. ನಿಪಿ 8 ರಲ್ಲಿ 3 ನೇ ಪ್ಯಾರಾದಲ್ಲಿ ಇರುವ ಅಂಶವನ್ನು ಆರೋಪಿ ಪರ ವಕೀಲರು ಸಾಕ್ಷಿಗೆ ಓದಿ ಹೇಳಲಾಗಿ ಆ ರೀತಿ ವಿಚಾರವನ್ನು ನಿಪಿ 8 ರಲ್ಲಿ ಬರೆದಿರುವುದು ನಿಜ ಎಂದು ಸಾಕ್ಷಿ ನುಡಿದಿರುತ್ತಾರೆ. ಅದಕ್ಕೆ ಪೂರಕವಾಗಿ ನಾನು ಬ್ಯಾಂಕಿಗೆ ಹೋಗಿ ಯಾವುದೇ ವಿಚಾರಣೆ ಮಾಡಿರುವುದಿಲ್ಲ. ಆರೋಪಿ ನನ್ನ ಹಾಗೂ ಇತರರ ವಿರುದ್ದ ಮಾಡಿರುವ ದೂರಿನಲ್ಲಿ ಇರುವ ಎಲ್ಲ ವ್ಯಕ್ತಿಗಳು ಆರೋಪಿಯ ವಿರುದ್ದ ಪ್ರತ್ಯೇಕ ಪ್ರಕರಣಗಳನ್ನು ದಾಖಲು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಮಹಿಳೆಯಾದ ಕಾರಣ ಅವರು ಇಟ್ಟಂತಹ ಚಕ್ಕುಗಳನ್ನು ಕದ್ದು ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.

ಪಿ.ಸಿ.ಜೆ. ಮತ್ತು ಜೆಎಂಎಫ್‌ಸಿ,
ಮಳವಳ್ಳಿ